**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**

**ಪಿ.ಸಿ.ಆರ್. ನಂ.20207/2021 ಸಿಡಬ್ಲ್ಯು -1**

| | |
|---|---|
| **ಸಾಕ್ಷಿದಾರರ ಹೆಸರು** | ಧನಲಕ್ಷ್ಮಿ. |
| **ಗಂಡನ ಹೆಸರು** | ಚಂದ್ರಶೇಖರ್, |
| **ವಯಸ್ಸು** | 82 ವರ್ಷ |
| **ಉದ್ಯೋಗ** | ಗೃಹಿಣಿ |
| **ವಾಸ** | ವಸಂತ ನಗರ, ಬೆಂಗಳೂರು |
| **ಪ್ರಮಾಣೀಕರಿಸಿದ ದಿನಾಂಕ** | 06.03.2026. |

**ದಂ.ಪ್ರ.ಸಂ.ಕಲಂ. 200 ರಡಿಯಲ್ಲಿ ಸಾಕ್ಷಿಗೆ ಪ್ರಮಾಣ ಪೂರ್ವಕ ಹೇಳಿಕೆ:**

ನನ್ನ ಗಂಡ ದಿ.19.11.2020 ರಂದು ರಕ್ತ ವಾಂತಿ ಮಾಡಿಕೊಂಡಿದ್ದರಿಂದ ಅವರನ್ನು ನಾನು ವಿಲ್ಸನ್ ಗಾರ್ಡನ್ ನಲ್ಲಿರುವ ಅಗಡಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಿರುತ್ತೇನೆ. ಐಸಿಯುಯಲ್ಲಿ ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಿದ್ದರು. ಅವರಿಗೆ ವೈದ್ಯರು ಕ್ಯಾನ್ಸರ್ ಕೊನೆಯ ಹಂತದಲ್ಲಿದೆ ಎಂದು ಹೇಳಿರುತ್ತಾರೆ. ನನ್ನ ಮಕ್ಕಳಾದ ಜಯಂತಿ ಮತ್ತು ಶಶಿಕಲಾ ಎನ್ನುವವರು ಚೆನ್ನೈನಲ್ಲಿ ವಾಸವಾಗಿದ್ದು, ನನ್ನ ಗಂಡನ ಆರೋಗ್ಯದ ಬಗ್ಗೆ ತಿಳಿಸಿರುತ್ತೇನೆ. ಆಗ ಶಶಿಕಲಾ ಮತ್ತು ಅವರ ಗಂಡನಾದ ರಾಜಶೇಖರ್ ರವರ ಅದೇ ದಿನ ಆಸ್ಪತ್ರೆಗೆ ಬಂದಿರುತ್ತಾರೆ. ನಂತರ ಆ ದಿನ ನನ್ನ ಮಗಳಾದ ಶಶಿಕಾಲ ಮತ್ತು ಅವರ ಗಂಡ ರಾಜಶೇಖರ್ ರವರು ವಸಂತನಗರದಲ್ಲಿರುವ ನನ್ನ ಮನೆಯಲ್ಲಿ ಉಳಿದು ಕೊಂಡಿರುತ್ತಾರೆ. ಮೂರು ದಿನಗಳ ನಂತರ ನನ್ನ ಇನ್ನೊಬ್ಬ ಮಗಳಾದ ಜಯಂತಿ ಮತ್ತು ಅವರ ಮಗ ತರುಣ್ ನನ್ನ ಗಂಡನನ್ನು ಆಸ್ಪತ್ರೆಯಲ್ಲಿ ನೋಡಿಕೊಂಡು ನನ್ನ ಮನೆಯಾದ ವಸಂತ ನಗರದಲ್ಲಿ ಉಳಿದುಕೊಂಡಿರುತ್ತಾರೆ. ದಿ.26.11.2020 ರಂದು ನನ್ನ ಇಬ್ಬರು ಹೆಣ್ಣು ಮಕ್ಕಳು ನನ್ನ ಗಂಡನು ದಾನಪತ್ರಕ್ಕೆ ಸಹಿ ಮಾಡಿದಂತೆ ಒಂದು ದಾಖಲೆಯನ್ನು ಸೃಷ್ಟಿಸಿಕೊಂಡಿರುತ್ತಾರೆ. ಆದರೆ ಸದರಿ ದಾನ ಪತ್ರವನ್ನು ನನ್ನ ಗಂಡನಾದ ಚಂದ್ರಶೇಖರ್ ರವರು ಆ ಇಬ್ಬರು ಹೆಣ್ಣುಮಕ್ಕಳಿಗೆ ದಾನ ಪತ್ರವನ್ನು ನೊಂದಾಯಿಸಿ ಕೊಟ್ಟಿರುವುದಿಲ್ಲ ಹಾಗೂ ಸದರಿ ದಾನ ಪತ್ರಕ್ಕೆ ಸಹಿ ಸಹ ಮಾಡಿರುವುದಿಲ್ಲ.

ದಿ.01.12.2020 ರಂದು ಡಾ.ಮಹೇಶ್ವರಿಯವರು ನನ್ನ ಗಂಡನಿಗೆ ಯಾವುದೇ ಚಿಕಿತ್ಸೆಯನ್ನು ನೀಡಿರುವುದಿಲ್ಲ ಮತ್ತು ಅವರು ನನ್ನ ಗಂಡನಿಗೆ ಚಿಕಿತ್ಸೆಯನ್ನು ನೀಡುವ ವೈದ್ಯರು ಸಹ ಅಲ್ಲ. ನನ್ನ ಗಂಡನಿಗೆ ಚಿಕಿತ್ಸೆ ನೀಡಿದ ಡಾಕ್ಟರ್ ಹೆಸರು ಶ್ರೀಹರಿ ಆಗಿರುತ್ತಾರೆ. ನನ್ನ ಗಂಡನಿಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ಡಾ.ಮಹೇಶ್ವರಿರವರು ನೀಡಿರುತ್ತಾರೆ. ದಿ.02.12.2020 ರಂದು ನನ್ನ ಹೆಣ್ಣು ಮಕ್ಕಳಾದ ಜಯಂತಿ ಮತ್ತು ಶಶಿಕಲಾ ರವರು ಗಾಂಧಿನಗರ ಉಪ ನೊಂದಾಣಾಧಿಕಾರಿ ಕಛೇರಿಯಲ್ಲಿ ಸದರಿ ದಾನ ಪತ್ರವನ್ನು ವಾಪಸ್ ಪಡೆದುಕೊಂಡು ಒಂದು ಸೆಟ್ಟಲ್ ಮೆಂಟ್ ಡೀಡ್ ನ್ನು ಸಹ ಮಾಡಿಕೊಂಡಿರುತ್ತಾರೆ. ಸದರಿ ಸೆಟ್ಟಲ್ ಮೆಂಟ್ ಡೀಡ್ ನ್ನು ನನ್ನ ಗಂಡನು ತಿರಸ್ಕರಿಸಿರುತ್ತಾರೆ. ಸದರಿ ದಿನದಿಂದು ನನ್ನ ಗಂಡ ಕ್ಯಾನ್ಸರ್ ಕಾಯಿಲೆಯಿಂದ ನರಳುತ್ತಿದ್ದರು. ಆದರೆ ಶಾಂತಿನಗರ ಉಪ ನೊಂದಾಣಾಧಿಕಾರಿ ಕಛೇರಿಯಿಂದ ರವಿ ಕುಮಾರ್ ಎನ್ನುವವರು ಆಸ್ಪತ್ರೆ ಬಂದಿರುವುದಿಲ್ಲ.

***ಮುಂದುವರೆದು ಸತ್ಯ ಪ್ರಮಾಣ ಹೇಳಿಕೆಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.***

***(ಸಾಕ್ಷಿಗೆ ಕೇವಲ ತಮಿಳು ಭಾಷೆ ಮಾತ್ರ ಬರುತ್ತಿದ್ದು, ಶ್ರೀ.ಸತೀಶ್.ಕೆ.ಬಿ, ಕೆಎಆರ್. ನಂ.648/2001 ರವರನ್ನು ಭಾಷಂತರಕಾರನ್ನಾಗಿ ನೇಮಕ ಮಾಡಲಾಗಿದ್ದು, ಸಾಕ್ಷಿಯು ತಮಿಳು ಭಾಷೆಯಲ್ಲಿ ಹೇಳಿದ್ದನ್ನು ಕನ್ನಡ ಭಾಷಗೆ ತರ್ಜುಮೆ ಮಾಡಿ ಹೇಳಿರುತ್ತಾರೆ. ನಂತರ ನಾನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲ ಬೆರಳಚ್ಚು ಮಾಡಲಾಯಿತು.)***

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**